ನಾದದ ಸೊಗಸು ಮಕ್ಕಳನ್ನು ಯಾವಾಗಲೂ ಮರುಳು ಮಾಡುತ್ತದೆ. ಅದನ್ನು ಪಂಜೆಯವರು ಬಲ್ಲವರಾಗಿದ್ದರು. ಮಕ್ಕಳಿಗೆ ಪ್ರಿಯವಾಗುವ ಸಂಗತಿಗಳಿಂದಲೇ ಇಲ್ಲಿ ಬೆಳಗಿನ ಅನುಭವವನ್ನು ಹಿಡಿಯಲಾಗಿದೆ.

ಬೇಂದ್ರೆಯವರ 'ಬೆಳಗು' ಎಂಬ ಅದ್ಭುತ ಕವಿತೆ ಪ್ರೌಢರಿಗಾಗಿ ಬರೆದದ್ದು. ಅಲ್ಲಿ 'ಶಾಂತಿರಸವೇ ಪ್ರೀತಿಯಿಂದ ಮೈದುಂಬಿತಣ್ಣ' ಎಂಬಂಥ ಆಧ್ಯಾತ್ಮಿಕ ಸ್ಪರ್ಶವುಳ್ಳ ಅಮೂರ್ತ ಕಲ್ಪನೆಗಳು ಸಹನೀಯವೂ ಸ್ವಾದ್ಯವೂ ಆಗಬಲ್ಲವು. ಮಕ್ಕಳಿಗಾಗಿ ಹೇಗೆ ಸೂರ್ಯೋದಯವನ್ನು ಗ್ರಹಿಸಬಹುದು? ಮೊದಲ ಸಾಲುಗಳಲ್ಲಿ ರಂಗಸ್ಥಳ ಎಂಬ ಮಾತು ಬರುವುದರಿಂದ ಅಲ್ಲಿ ಬರುವ ಜಗಳ ಮತ್ತು ನೆತ್ತರ ಉಲ್ಲೇಖ ಸಹ್ಯವಾಗುವುದು. ಬೆಳಕು, ಬಿಸಿಲು, ಮುಂಜಾವದಲ್ಲಿ ನಾವು ಕೇಳುವ ಹಕ್ಕಿಗಳ ಚಿಲಿಪಿಲಿ ಇವುಗಳ ವರ್ಣನೆ ಮುಂದಿನ ಸಾಲುಗಳಲ್ಲಿ ಬರುತ್ತದೆ. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಎಂಬ ಪ್ರಸಿದ್ಧವಾದ ವಚನದ ಸಾಲೊಂದು ಉಂಟಷ್ಟೆ? ಜಗತ್ತಿನ ಚಟುವಟಿಕೆಯೆಲ್ಲಾ ಸೂರ್ಯನಿಂದಲೇ ಚೋದಿತವಾಗುತ್ತವೆ ಎಂಬುದನ್ನು ಪಂಜೆಯವರ ಕವಿತೆಯೂ ಗ್ರಹಿಸುತ್ತಾ ಇದೆ. ಸೂರ್ಯೋದಯದ ಬಣ್ಣಗಾರಿಕೆ ಮುಂದಿನ ಸಾಲುಗಳ ವಿಷಯ. ಜೊತೆಗೆ ಬಿಸಿಲಿನ ಶುದ್ಧೀಕರಣ ಶಕ್ತಿಯನ್ನೂ ಕವಿತೆ ಕೈವಾರಿಸುತ್ತದೆ. ಕೊನೆಯ ಸಾಲು ಹೇರದಿರುವ ಸಹಜನೀತಿಯ ಅಥವಾ ಲೋಕಗ್ರಹಿಕೆಯ ಮಾತು. ಯಾವುದೂ ಮಕ್ಕಳ ಗ್ರಹಿಕೆಗೆ ಭಾರವಾಗುವುದಿಲ್ಲ. ಪ್ರೌಢತೆಯ ಹೆಗಲ ಮೇಲೆ ಮುಗ್ಧತೆಯ ಸವಾರಿ ಎಂದು ನಾನು ಹೇಳಿದ ಮಾತು ಇಂಥ ಪದ್ಯಗಳಿಗೆ ಎಷ್ಟು ಚೆನ್ನಾಗಿ ಅನ್ವಯವಾಗುತ್ತದೆ, ನೋಡಿ!

ಪಂಜೆಯ ನಂತರ ನಾವು ನೆನೆಯಬೇಕಾದದ್ದು ಮಕ್ಕಳ ಸಾಹಿತ್ಯದ 'ರಾಜ ಮತ್ತು ರತ್ನ' ಎಂದು ಖ್ಯಾತರಾಗಿರುವ ಜಿ.ಪಿ. ರಾಜರತ್ನಂ ಅವರನ್ನು. ಮಕ್ಕಳ ಕವಿತೆ, ಕಥೆಗಳನ್ನು ಸಮೃದ್ಧವಾಗಿ ಬರೆದು, ಬಾಲಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ರಾಜರತ್ನಂ. ಅವರ 'ತುತ್ತೂರಿ' ಹಾಡನ್ನು ಕೇಳಿ ಯಾವ ಮಗುವಿನ ಕಣ್ಣಲ್ಲಿ ನೀರೂರುವುದಿಲ್ಲ?

## ತುತ್ತೂರಿ: ಜಿ.ಪಿ.ರಾಜರತ್ನಂ

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸನಿದಪ ಮಗರಿಸ ಊದಿದನು

ತನಗೇ ತುತ್ತುರಿ ಇದೆಯೆಂದ
ಬೇರಾರಿಗು ಅದು ಇಲ್ಲೆಂದ
ಕಸ್ತೂರಿ ನಡೆದನು ಬೀದಿಯಲಿ
ಜಂಬದ ಕೋಳಿಯ ರೀತಿಯಲಿ

ತುತ್ತುರಿಯೂದುತ ಕೊಳದ ಬಳಿ
ನಡೆದನು ಕಸ್ತೂರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ